ಓಎಸ್ ನಂ.ಃ 23/15

ಪಿಡಬ್ಲು: 1

(ಸಾಕ್ಷಿಯನ್ನು ದಿಃ 05-12-2018 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿ ಮುಂದುವರಿದ ಪಾಟೀ ಸವಾಲಿಗೆ ಒಳಪಡಿಸಲಾಯಿತು.)

**ಮುಂದುವರಿದ ಪಾಟೀಸವಾಲು ಃ ಪ್ರತಿವಾದಿ ಪರ ಃ ಶ್ರೀ ಜಿ.ಎಫ್.ಎನ್. ವಕೀಲರಿಂದ**

ನಾನು ದ್ವಿತೀಯ ಪಿಯುಸಿ ವರೆಗೆ ಕಲಿತಿದ್ದೇನೆ. ನಾನು ಅಕ್ಕಸಾಲಿಗ ವೃತ್ತಿ ನಡೆಸುತ್ತಿದ್ದೇನೆ. ನಾನು ಬ್ಯಾಂಕಿನಲ್ಲಿ ಖಾತೆ ಹೊಂದಿದ್ದು ವ್ಯವಹಾರ ನಡೆಸುತ್ತೇನೆ. ನಾನು ಪ್ರತಿ ವರ್ಷ ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಆದರೆ ನಾನು ಹಣದ ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಕ್ರಯದ ಪ್ರತಿಫಲದ ಬಾಬ್ತು ಮುಂಗಡ ಹಣವನ್ನು ಚೆಕ್ ಮೂಲಕ ಪಾವತಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಆ ರೀತಿ ನಾವು ಪ್ರತಿವಾದಿಗೆ ಹೇಳಿದ್ದರಿಂದ ಚೆಕ್ಕು ನೀಡಿದರೆ ವಿಳಂಬ ಆಗುವುದರಿಂದ ನಗದು ಹಣ ಕೊಡುವಂತೆ ಕೋರಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ಬಂಗಾರವನ್ನು ಮಾರಾಟ ಮಾಡಿ ಬಂದ ಹಣ ನನ್ನ ಬಳಿ ಇತ್ತು. ಯಾವುದೇ ವ್ಯಕ್ತಿಗೆ ರೂ. 20,000/- ಗಳಿಗಿಂತ ಮೀರಿದ ಹಣವನ್ನು ಪಾವತಿ ಮಾಡಬೇಕಾದರೆ ಕಾನೂನು ರೀತಿಯ ಚೆಕ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಕೊಡಬೇಕಾಗುತ್ತದೆ ಎಂದರೆ ಸರಿ. ಕಾರವಾರದ ಶ್ರೀ ಕೆ.ಟಿ. ಭೂತೆ ವಕೀಲರ ಬಳಿ ಸದರಿ ಕರಾರು ಪತ್ರವನ್ನು ತಯಾರು ಮಾಡಿಸಿದ್ದೇನೆ. ನಾನು ಸದರಿ ವಕೀಲರ ಬಳಿ ಯಾವಾಗಲೂ ಸಹ ಹೋಗಿರಲಿಲ್ಲ ಮತ್ತು ನಿ.ಪಿ. 8 ಕ್ರಯದ ಕರಾರು ಪತ್ರದ ಮೇಲೆ ಇರುವ ಸಹಿ ಪ್ರತಿವಾದಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ. 8 ಕ್ಕೆ ಸಹಿ ಮಾಡಿದ್ದಾರೆ ಎಂದು ಹೇಳುವ ಸಾಕ್ಷಿದಾರರಿಗೂ ಮತ್ತು ಪ್ರತಿವಾದಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ನನ್ನ ಹೆಸರಿಗೆ ದಿಃ 26.05.2012 ರಂದು ರೂ. 1,00,000/- ಗಳಿಗೆ ನೀಡಿರುವ ಮೊತ್ತಕ್ಕೂ ಮತ್ತು ಪ್ರಸ್ತುತ ದಾವಾ ವ್ಯವಹಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಗೆ ಪ್ರತಿವಾದಿಯ ವಿರುದ್ಧ ನೀಡಿದ್ದ ದೂರಿನಲ್ಲಿ ಯಾವುದೇ ಹುರುಳಿಲ್ಲ ಎಂಬುದಾಗಿ ನಿ.ಪಿ. 6 ಮತ್ತು 7 ರಂತೆ ಪೋಲಿಸರು ಸ್ವೀಕೃತಿ ಮತ್ತು ಹಿಂಬರಹ ನೀಡಿದ್ದಾರೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ವಿರುದ್ಧ ನಿ.ಪಿ. 9 ರಂತೆ ದಾಖಲು ಮಾಡಿದ್ದ ಖಾಸಗಿ ದೂರು ಈಗ ಯಾವ ಹಂತದಲ್ಲಿ ಇರುತ್ತದೆ ಎಂಬುದಾಗಿ ನನಗೆ ಹೇಳಲಾಗುವುದಿಲ್ಲ. ಸದರಿ ಖಾಸಗಿ ದೂರನ್ನು ಸಹ ನ್ಯಾಯಾಲಯವು ಯಾವುದೇ ಸತ್ಯಾಂಶ ಇಲ್ಲ ಎಂಬುದಾಗಿ ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ಕ್ರಯದ ಕರಾರು ಪತ್ರದ ಪ್ರಕಾರ ನಿಗದಿತ ಅವಧಿಯೊಳಗೆ ನಾನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಶುದ್ಧ ಕ್ರಯ ಪತ್ರವನ್ನು ಮಾಡಿಸಿಕೊಳ್ಳದೇ ಇದ್ದುದರಿಂದ ಪ್ರತಿವಾದಿಯು 3ನೇ ಪಕ್ಷಗಾರರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ನಾನು ಲೇವಾದೇವಿ ವ್ಯವಹಾರ ನಡೆಸುತ್ತಿದ್ದು ಆ ಸಂಬಂಧ ಗ್ರಾಹಕರಿಗೆ ನಾನು ಸಾಲ ನೀಡಿ ಅವರಿಂದ ಕ್ರಯದ ಕರಾರು ಪತ್ರಗಳನ್ನು ಬರೆಸಿಕೊಳ್ಳುವ ಹವ್ಯಾಸ ಹೊಂದಿದ್ದೇನೆ ಎಂದರೆ ಸುಳ್ಳು.

ಈ ದಾವಾ ದಾಖಲು ಮಾಡಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾ ಪ್ರಮಾಣ ಪತ್ರವನ್ನು ತಯಾರು ಮಾಡುವ ಕಾಲಕ್ಕೂ ಸಹ ನಾನೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇನೆ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾ.ದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.